

# ಮಾಗಿಯಲ್ಲಿ ಅರಳುವ ಆರ್ಕಿಡ್

■ ಚಿತ್ರ– ಬರಹ:
**ಪುಟ್ಟರಾಜು ಕೈಗಾ**

ಡೆಂಡ್ರೊಬಿಯಮ್ ಒವೇಟಮ್ ಎಂಬ ಜಾತಿ ಸಸ್ಯವಿದು. ಅಂತರರಾಷ್ಟ್ರೀಯ IUCN ಸಂಸ್ಥೆಯ ಪ್ರಕಾರ ಇದು ಅಳಿವಿನಂಚಿನಲ್ಲಿರುವ ಸಸ್ಯ. ಅದೂ ಪಶ್ಚಿಮ ಘಟ್ಟಕ್ಕೆ ಮಾತ್ರ ಸೀಮಿತವಾದದ್ದು. ಈ ಆರ್ಕಿಡ್ ಕಾಳಿ ಕಣಿವೆಯಲ್ಲಿರುವ ಕೈಗಾದಲ್ಲಿ ಅರಳುತ್ತದೆ ಎನ್ನುವುದೇ ಹೆಮ್ಮೆಯ ಸಂಗತಿ.

ಡೆಂಡ್ರೊಬಿಯಮ್ ಎಂಬುದು ಜಾತಿಸೂಚಕ ಹೆಸರು. ಗ್ರೀಕ್ ಭಾಷೆಯಲ್ಲಿ ಡೆಂಡ್ರೊನ್‌ಗೆ ಮರ ಮತ್ತು ಬಯೋಸ್‌ಗೆ ಜೀವಿ ಎಂದರ್ಥ. ಅಂದರೆ ಮರದ ಮೇಲಿರುವ ಜೀವಿ. ಈ ಜಾತಿ ಸೂಚಕ ಹೆಸರನ್ನು ಒಲಾಫ್ ಸ್ವಾರ್ಟ್ಜ್ ಎಂಬವರು ಕ್ರಿ.ಶ.1799ರಲ್ಲಿ ನಾಮಕರಣ ಮಾಡಿದ್ದಾರೆ.

ಈ ಪ್ರಭೇದದಲ್ಲಿ ಸಸ್ಯದಲ್ಲಿ ಎಲೆ ಇರುವಾಗ ಹೂಗಳಿರುವುದಿಲ್ಲ. ಹೂಗಳಿರುವಾಗ ಎಲೆಗಳಿರುವುದಿಲ್ಲ. ಡಿಸೆಂಬರ್‌ನಿಂದ ಜನವರಿವರೆಗೆ ಹೂವುಗಳು ಅರಳುತ್ತವೆ. ಡೆಂಡ್ರೊಬಿಯಮ್ ಜಾತಿಯಲ್ಲಿ 1600 ಪ್ರಭೇದಗಳಿವೆಯೆಂದು ಅಂದಾಜು ಮಾಡಲಾಗಿದೆ. ಈ ಪ್ರಭೇದಗಳು ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಜಪಾನ್, ಕೊರಿಯ, ಇಂಡೊನೇಷ್ಯಾ ಮತ್ತು ಮಲೇಷ್ಯಾಗಳಲ್ಲಿ ಕಂಡುಬರುತ್ತವೆ.

ಭಾರತದಲ್ಲಿ ಕಂಡು ಬರುವ ಪ್ರಭೇದಗಳು 102. ಕರ್ನಾಟಕದಲ್ಲಿ 17 ಪ್ರಭೇದಗಳಿವೆ. ಪಶ್ಚಿಮ ಘಟ್ಟದಲ್ಲಿರುವ ಆರ್ಕಿಡ್‌ಗಳು ಸಂಖ್ಯೆ ಮತ್ತು ವೈವಿಧ್ಯದಲ್ಲಿ ವಿಪುಲವಾಗಿವೆ. ಇದಕ್ಕೆ ಪ್ರಮುಖ ಕಾರಣ ಉಷ್ಣ ವಾತಾವರಣ. ಮಾಗಿಯ ಚಳಿಯಲ್ಲಿ ಅರಳುವ ಡೆಂಡ್ರೊಬಿಯಮ್ ಒವೇಟಮ್ ಕ್ರಿಸ್ಮಸ್ ಹಬ್ಬಕ್ಕೆ ಹೇಮಂತ ಋತುವಿನ ಕೊಡುಗೆ ಎಂದರೆ ತಪ್ಪಾಗಲಾರದು. ಪಿಸ್ತಾ ಹಸಿರು ಮತ್ತು ತಿಳಿ ಹಳದಿ ಮಿಶ್ರಿತ ಹೂವು, ಕ್ರಿಸ್ಮಸ್ ಗಿಡವನ್ನು ಶೃಂಗಾರ ಮಾಡಿ ಅದಕ್ಕೆ ಕಟ್ಟುವ ಸುಂದರ ಪುಟಾಣಿ ಗಂಟೆಯಂತೆ ಇದರ ಪುಷ್ಪಮಂಜರಿ ತೋರುತ್ತದೆ.

ಹೂವುಗಳು ಅರಳುವುದೇ ಒಂದು ಪ್ರಕೃತಿ ವೈಚಿತ್ರ್ಯ. ಆದರೆ ದಾರಿ ಹೋಕರಿಗೆ ಅದರ ಮಹತ್ವ ಗೊತ್ತಾಗುವುದಿಲ್ಲ. ಕೆಲವರು ಹೂಗಳನ್ನು ಕಿತ್ತೊಯ್ಯುವವರು. ಇನ್ನು ಕೆಲವರು ಇಡೀ ಸಸ್ಯವನ್ನೇ ಕಿತ್ತೊಯ್ದು ಮನೆಯಲ್ಲಿ ನೆಡುತ್ತಾರೆ. ಆ ಸಸ್ಯ ಸತ್ತು, ಆ ತಳಿ ಮತ್ತೆಂದೂ ವಂಶಾಭಿವೃದ್ಧಿಯಾಗದೆ ಅವನತಿ ಹೊಂದುತ್ತದೆ. ಕಾಡು ಪುಷ್ಪಗಳನ್ನು ನೋಡಿ ಖುಶಿ ಪಡುವುದೇ ಉತ್ತಮ. ಹಾಗೂ ಬೇಕಿದ್ದರೆ ಮಾರುಕಟ್ಟೆಯಲ್ಲಿ ವೈವಿಧ್ಯಮಯ ಹೈಬ್ರಿಡ್ ತಳಿಯ ಆರ್ಕಿಡ್‌ಗಳು ಸಿಗುತ್ತವೆ. ●

